3. ವಿದ್ಯಾರ್ಥಿಗಳಿಗೆ ಕುಡಿಯುವ ನೀರಿನ ತೊಂದರೆ ಇದ್ದು ಅಲ್ಲಿಗೆ ಕೂಡಲೇ ಕೊಳವೆ ಬಾವಿಗಳನ್ನ ತೋಡಿಸಿ ವಿದ್ಯಾರ್ಥಿಗಳಿಗೆ ಅನುಕೂಲತೆ ಮಾಡಿಕೊಡಲು ಸರ್ಕಾರದವರು ಕ್ರಮಕೈಗೊಳ್ಳುವರೇ ?

ಶ್ರೀ ಎಂ.ವೈ. ಘೋರ್ಪಡೆ (ಗ್ರಾಮೀಣಾಭಿವೃದ್ಧಿ ಮತ್ತು ಪಂ. ರಾಜ್ ಸಚಿವರು):–

ಅ. ಇಲ್ಲ

ಆ. ಗ್ರಾಮೀಣ ನೀರು ಸರಬರಾಜು ಯೋಜನೆಯಡಿಯಲ್ಲಿ ಶಾಲೆಗಳಿಗೆ ಸೀಮಿತವಾಗಿ ಕೊಳ ಬಾವಿಗಳನ್ನು ಒದಗಿಸಿರುವುದಿಲ್ಲ. ಹಳ್ಳಿಯ ಎಲ್ಲಾ ಸಾರ್ವಜನಿಕ ಉಪಯೋಗಕ್ಕಾ ಒದಗಿಸಲಾಗುವುದು.

ಡಂಕಲ್ ಡ್ರಾಫ್ಟ್ ಅನುಷ್ಠಾನ ಕುರಿತು

(1979): ಶ್ರೀ ಎಂ.ಎಸ್. ಆತ್ಮಾನಂದ (ಮಂಡ್ಯ):– ಮಾನ್ಯ ಕೃಷಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿ ದಯವಿಟ್ಟು ಉತ್ತರಿಸುವರೇ ?

ಅ. ಡಂಕಲ್ ಡ್ರಾಫ್ಟ್ ರಾಜ್ಯದ ರೈತರಿಗೆ ಮಾರಕವಾಗಿದೆ ಎಂಬ ಅಭಿಪ್ರಾಯ ರೈತ ಸಮುದಾಯ ಉಂಟಾಗಿರುವುದು ಸರ್ಕಾರವು ಗಮನಿಸಿದೆಯೆ;

ಆ. ಡಂಕಲ್ ಡ್ರಾಫ್ಟ್ ಅನುಷ್ಠಾನದ ಬಗ್ಗೆ ಸರ್ಕಾರವು ಏನಾದರೂ ನಿಲುವನ ತೆಗೆದುಕೊಂಡಿದೆಯೆ ?

ಶ್ರೀ ಎನ್. ಹುಚ್ಚಮಾಸ್ತಿಗೌಡ (ಕೃಷಿ ಸಚಿವರು):–

ಅ. ಸರ್ಕಾರದ ಗಮನಕ್ಕೆ ಬಂದಿದೆ

ಆ. "ಡಂಕಲ್ ಡ್ರಾಫ್ಟ್" ಬಗ್ಗೆ ಇನ್ನು ಕೇಂದ್ರ ಸರ್ಕಾರವು ಮಾತುಕತೆ ನಡೆಸುತ್ತಿರುವುದರಿಂ ಇದರ ಪರಿಣಾಮದ ಬಗ್ಗೆ ಈಗ ಸಮೀಕ್ಷಿಸುವುದು ಅಕಾಲಿಕವಾಗುತ್ತದೆ. ಆದರೂ, ರೈತರ ಹಿತವನ ರಕ್ಷಿಸಲು ಮತ್ತು ಪ್ರಸ್ತಾವನೆಯ ಎಲ್ಲಾ ಅಂಶಗಳನ್ನು ಕೂಲಂಕಷವಾಗಿ ಪರಿಶೀಲಿಸಲು ರಾ ಸರ್ಕಾರವು ಕೇಂದ್ರ ಸರ್ಕಾರವನ್ನು ಕೋರಿದೆ.

ರಾಜ್ಯದಲ್ಲಿ ತೋಟಗಾರಿಕೆ ವ್ಯವಸಾಯವನ್ನು ಹೆಚ್ಚಿಸುವುದು

(1982): ಶ್ರೀ ಮಲ್ಲಾರಿಗೌಡ ಎಸ್. ಪಾಟೀಲ್ (ಸಂಕೇಶ್ವರ):– ಮಾನ್ಯ ತೋಟಗಾರಿಕೆ ರಾ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ. ಬೆಳಗಾಂ ಜಿಲ್ಲೆಯಲ್ಲಿ ಹಾಗೂ ರಾಜ್ಯದಲ್ಲಿ ತೋಟಗಾರಿಕೆ ವ್ಯವಸಾಯವನ್ನು ಹೆಚ್ಚಿಸ ಸರ್ಕಾರದ ಕಾರ್ಯಕ್ರಮಗಳೇನು;

ಆ. ಹಿಡಕಲ್ ಜಲಾಶಯದಲ್ಲಿರುವ ಹಾರ್ಟಿಕಲ್ಚರಲ್ ಉದ್ಯಾನವನ್ನು ಗಣನೆಗೆ ತೆಗೆದುಕೊಂ ಹಾರ್ಟಿಕಲ್ಚರಲ್ ಕಾಲೇಜು ಸ್ಥಾಪಿಸಲು ಸರ್ಕಾರ ಹಿಂದೇಟು ಹಾಕುತ್ತಿರುವುದಕ್ಕೆ ಕಾರಣವೇನು;

ಇ. ಉತ್ತರ ಕರ್ನಾಟಕದಲ್ಲಿ ಹಣ್ಣು ಬೇಸಾಯ ಅಭಿವೃದ್ಧಿಗಾಗಿ ಒಳ್ಳೆಯ ಮಾವಿನ ತಳಿ, ಸಪೋ ತಳಿ, ಹಾಗೂ ಪೇರಲ ಹಣ್ಣು ಹಾಗೂ ಇದೇ ತರಹದ ಹಲವಾರು ಹಣ್ಣು ಅಭಿವೃದ್ಧಿ ಕಾರ್ಯಕ್ರಮ ತೆಗೆದುಕೊಳ್ಳಲು, ಹಮ್ಮಿಕೊಂಡಿರುವ ವಿಶೇಷ ಯೋಜನೆ ಏನು ?